# ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್-1) ರವರ ನ್ಯಾಯಾಂಗಣದಲ್ಲಿ

## ಎಸ್.ಸಿ. ಸಂಖ್ಯೆ: 1075/2023

ಚಾ.ಸಾ-1 ಪ್ರಾ.ಸಾ- 1

ದಿಃ 19.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಮಂಜುನಾಥ |
| ತಂದೆ ಹೆಸರು | ಚಂದ್ರಯ್ಯ @ ಗಂಗಪ್ಪ |
| ವಯಸ್ಸು | 37 ವರ್ಷ |
| ವೃತ್ತಿ | ಕೇಬಲ್ ಬಿಸಿನೆಸ್ |
| ವಿಳಾಸ | ವಿದ್ಯಾರಣ್ಯಪುರ, ಬೆಂಗಳೂರು |

ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ನಾನು ವಿದ್ಯಾರಣ್ಯಪುರದಲ್ಲಿ ಸುಮಾರು 5 ವರ್ಷದಿಂದ ನಮ್ಮ ಕುಟುಂಬದವರೊಂದಿಗೆ ವಾಸವಾಗಿರುತ್ತೇನೆ.

2. 1 ರಿಂದ 3 ನೇ ಆರೋಪಿತರು ನನಗೆ ಪರಿಚಯವಿದ್ದಾರೆ. ಆರೋಪಿತರು ಯಾರು ನನ್ನ ಮೇಲೆ ಯಾವುದೇ ಗಲಾಟೆ ಮಾಡಿ ಹಲ್ಲೆ ಮಾಡಿರುವುದಿಲ್ಲ. ಸುಮಾರು 4 ವರ್ಷಗಳ ಹಿಂದೆ ಯಾರೋ ಅಪರಿಚಿತರು ನನ್ನ ಮೇಲೆ ಹಲ್ಲೆ ಮಾಡಿದ ಕಾರಣಕ್ಕೆ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಪೋಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಯು ಪಿರ್ಯಾದಾಗಿದ್ದು ಅದನ್ನು ನಿ.ಪಿ- 1 ಎಂದು, ನನ್ನ

ಸಹಿಯನ್ನು ನಿ.ಪಿ- 1(ಎ) ಎಂದು ಗುರುತಿಸಲಾಯಿತು.

3. ಪೋಲೀಸರು ಇನ್ನೊಂದು ದಾಖಲೆಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ, ಅದನ್ನು ಈಗ ನಿ.ಪಿ- 2 ಎಂದು ನನ್ನ ಸಹಿಯನ್ನು ನಿ.ಪಿ- 2(ಎ) ಎಂದು ಗುರುತಿಸಲಾಯಿತು. ನಿ.ಪಿ- 1 ಮತ್ತು 2 ರ ಸಂಗತಿಗಳು ನನಗೆ ಗೊತ್ತಿಲ್ಲ. ನಾನು ಆರೋಪಿತರ ವಿರುದ್ಧ ಯಾವುದೇ ಮರುಹೇಳಿಕೆಯನ್ನು ನೀಡಿರುವುದಿಲ್ಲ.

ಈ ಹಂತದಲ್ಲಿ ಮಾನ್ಯ ಮುಖ್ಯ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯ ಹೇಳಿಕೆ ಹಾಗು ಕಡತದಲ್ಲಿನ ದಾಖಲೆಗಳನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.

<u>ಪಾಟಿಸವಾಲುಃ ಮಾನ್ಯ ಅಭಿಯೋಜಕರಿಂದಃ</u>

4. ದಿಃ 05.01.2022 ರಂದು ಸಂಜೆ ಸುಮಾರು 5.45 ರ ವೇಳೆಯಲ್ಲಿ 2 ನೇ ಆರೋಪಿಯ ಮನೆ ಹತ್ತಿರ ಆರೋಪಿತರನ್ನು ಕರೆಸಿಕೊಂಡು ನನ್ನ ಮೇಲೆ ಜಗಳ ಮಾಡಿ, 1 ನೇ ಆರೋಪಿಯು ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಮಚ್ಚಿನಿಂದ ತಲೆ ಮೇಲೆ ಹೊಡೆದ ಮತ್ತು ನಾನು ಕೈ ಅಡ್ಡ ಇಟ್ಟಿದ್ದರಿಂದ ನನ್ನ ಎಡ ಮುಂಗೈಗೆ ರಕ್ತ ಗಾಯವಾಗಿತ್ತು ಎಂದರೆ ಸರಿಯಲ್ಲ. ಈಗ ನಿ.ಪಿ- 1 ರಂತೆ ನನಗೆ ಓದಿ ಹೇಳಿದ ಪಿರ್ಯಾದಿನಂತೆ ನಾನು ಪೋಲೀಸರ ಮುಂದೆ ಆರೋಪಿತರ ವಿರುದ್ಧ ಪಿರ್ಯಾದಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂದಿಸಿದಂತೆ ದಿಃ 06.01.2022 ರಂದು ಕೃತ್ಯ ನಡೆದ ಸ್ಥಳದಲ್ಲಿ ನಿ.ಪಿ- 2 ರಂತೆ ಪಂಚನಾಮೆ ಕ್ರಮವನ್ನು ಜರುಗಿಸಿರುತ್ತಾರೆ ಮತ್ತು ಅದನ್ನು ಓದಿ ಹೇಳಿದ ಮೇಲೆ ಅದರ ಮೇಲೆ ಸಹಿ

ಮಾಡಿರುತ್ತೇನೆ ಎಂದರೆ ಸರಿಯಲ್ಲ.

5. ದಿಃ 20.01.2022 ರಂದು ಪೋಲೀಸರಿಗೆ ನಾನು ಆರೋಪಿತರ ವಿರುದ್ಧ ಕೆಲ ವಿಚಾರಗಳನ್ನು ಮರು ಹೇಳಿಕೆ ಮುಖಾಂತರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ- 3 ರಂತೆ ನನಗೆ ಓದಿ ಹೇಳಲಾಯಿತು ಮತ್ತು ಅದರಂತೆ ನಾನು ಸದರಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಮತ್ತು ನಾನು ರಾಜಿಯಾಗಿರುವುದರಿಂದ ಅವರಿಗೆ ನಾನು ಸಹಾಯ ಮಾಡುವ ಉದ್ದೇಶದಿಂದ ನಾನು ನಿ.ಪಿ- 1 ರಿಂದ 3 ರಂತೆ ಹೇಳಿಕೆಗಳನ್ನು ದಾಖಲೆಗಳಿಗೆ ಸಹಿ ಮಾಡಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಇಲ್ಲ

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಎಂ. ಚಂದ್ರಶೇಖರ್ ರೆಡ್ಡಿ)
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.